ಎಷ್ಟು ದೊಡ್ಡ ಶಿಕ್ಷೆ ಅಂತ... ಹೀಗಾಗಬೇಕಿತ್ತೇ... ಎಲ್ಲಿ ಎಡವಿದೆ? ಯಾಕೆ ಎಡವಿದೆ? ಎಡವಿದ್ದು ಯಾರು? ಒಂದೂ ತಿಳಿಯುತ್ತಿಲ್ಲ. ದಿನಗಳೆಲ್ಲ ವರುಷಗಳಾದವು. ಆದ್ರೆ ಈ ಗೊಂದಲ ಮಾತ್ರ ಸರಿಯಾಗಲೇ ಇಲ್ಲ...' ದುಃಖಿಸಿದ. ಗಲ್ಲದ ಮೇಲೆ ನೀರು ಹರಿಯತೊಡಗಿತ್ತು. 'ಯಾವ ಜನ್ಮದಲ್ಲಿ ಯಾವ ಪಾಪ ಮಾಡಿದ್ದೆನೋ ಯಾರಿಗೆ ಗೊತ್ತು ವಾಸಂತಿ... ನನ್ನನ್ನ ಈ ದುಃಖದಿಂದ ಬಿಡುಗಡೆ ಮಾಡುವವರು ಯಾರು?' ಎರಡೂ ಕೈಗಳಲ್ಲಿ ಮುಖ ಮುಚ್ಚಿಕೊಂಡು ಅಳತೊಡಗಿದ.

ವಾಸಂತಿ ಸುಮಾರು ಹೊತ್ತು ಮೌನವಾಗೇ ಕುಳಿತಿದ್ದಳು. ಅವನ ಆವೇಗ ಇಳಿಯಲಿ ಎಂದೇ ಕಾದಳೇನೋ.

'ನನಗೂ ಗೊತ್ತಿಲ್ಲ...' ಬಾಯಿ ಬಿಟ್ಟಳು. 'ತಪ್ಪೇ ಮಾಡದೆ, ತಪ್ಪಿತಸ್ಥಳಾಗುವ, ಶಿಕ್ಷೆ ಅನುಭವಿಸುವ ಜೀವನವನ್ನ ನನ್ನ ತವರು ಮನೆಯೇ ನನಗೆ ಕಲಿಸಿಕೊಟ್ಟುಬಿಟ್ಟಿತು. ಅದೇ ನಿಮ್ಮ ಮನೆಯಲ್ಲೂ ಮುಂದುವರಿಯಿತು, ಅಷ್ಟೆ. ಬಹುಶಃ ನಮ್ಮ ಬದುಕು ಹೀಗೇ ಅಂತ ಕಾಣಿಸುತ್ತೆ. ಸುಮತಿ ನಿಮ್ಮನ್ನು ಚೆನ್ನಾಗಿಯೇ ನೋಡಿಕೊಳ್ಳುತ್ತಿದ್ದಾಳೆ. ಮಗಳನ್ನು ಕೂಡ ನಾನೇನೂ ನಿಮ್ಮಿಂದ ಕಿತ್ತುಕೊಂಡಿಲ್ಲ. ಮತ್ತೂ ಯಾಕೆ ಈ ದುಃಖ?' ಸ್ವಲ್ಪ ಆದರದಿಂದ ಕೇಳಿದಳು.

'ಎಲ್ಲ ಇದ್ದೂ ಎಲ್ಲ ಕಳೆದುಕೊಂಡೆ ಅನ್ನಿಸುತ್ತೆ ವಾಸಂತಿ. ಅವತ್ತು ನಾನು ನಿನ್ನನ್ನ ಹೊಡೆಯದೆ ಇದ್ದಿದ್ರೆ... ನೀನು ನನ್ನ ಜೊತೆಯಲ್ಲಿ ಸುಖವಾಗಿರುತ್ತಿದ್ದೆ. ನಾನು ತಪ್ಪು ಮಾಡಿದೆ...' ಹಲುಬಿದ. 'ನನ್ನ ಸಹನೆ ಪೂರ್ತಿ ಕೆಡಿಸಿಕೊಂಡು ಬಿಟ್ಟಿದ್ದೆ. ಎಷ್ಟೋ ಸಲ ಅನ್ನಿಸಿದೆ... ಅವತ್ತು ನಿನ್ನನ್ನ ಹೊಡೆಯಬಾರದಿತ್ತು... ಗರ್ಭಿಣಿ ನೀನು... ಅಂತಹುದರಲ್ಲಿ... ಛೇ... ನನ್ನನ್ನು ಕ್ಷಮಿಸು ವಾಸಂತಿ...'

'ಯಾವತ್ತೂ ಒಂದೇ ಒಂದು ಘಟನೆಯಿಂದ ಬದುಕು ಬದಲಾಗಲ್ಲ ರೀ... ಅನೇಕ ಸಂದರ್ಭಗಳ ಸರಮಾಲೆಯಲ್ಲಿ ನಾವು ಬದುಕುತ್ತಿರುತ್ತೀವಿ. ಒಂದು ಘಟನೆ ಅದಕ್ಕೆ ಕಾರಣವಾಗಿ ಕಾಣುತ್ತೆ ಅಷ್ಟೆ. ಈಗ ಅದನ್ನೆಲ್ಲ ನೆನೆಯುವುದರಲ್ಲಿ ಅರ್ಥ ಇಲ್ಲ. ಇನ್ನೇನು ಸ್ವಲ್ಪ ಹೊತ್ತಿನಲ್ಲಿ ಪುಟ್ಟಿ ಬರ್ತಾಳೆ. ಅವಳ ಹತ್ತಿರ ಇದನ್ನೆಲ್ಲ ಮಾತನಾಡುವುದು ಬೇಡ...' ಒಳಗೆ ಹೋಗಲೆಂದು ಎದ್ದಳು.

'ಒಂದು ನಿಮಿಷ ವಾಸಂತಿ...' ಕಣ್ಣಲ್ಲಿ ನೀರು ತುಂಬಿಕೊಂಡು ಕೇಳಿದ 'ಮಾವ ನಿನ್ನ ಹೆಸರಿಗೆಂದು ಇಟ್ಟ ಆಸ್ತಿಯನ್ನೆಲ್ಲ ನೀನು ಪುಟ್ಟಿಗೆ ಕೊಟ್ಟುಬಿಡು ಅಂತ ಸುಮತಿಗೆ ಹೇಳಿದ್ದೆಯಂತೆ. ಅದನ್ನೇನೋ ಹಾಗೇ ಮಾಡಬಹುದು. ಆದರೆ ನನ್ನ ಆಸ್ತಿಯಲ್ಲಿ ನಿನ್ನ ಹೆಸರಿದೆ ವಾಸಂತಿ. ಎಕರೆಗಟ್ಟಲೆ ತೋಟ, ಗದ್ದೆ, ದೊಡ್ಡ ಮನೆ... ಎಲ್ಲದರಲ್ಲೂ ನಿನ್ನ ಹೆಸರಿದೆ. ಈ ಪುಟ್ಟ ಮನೆಯಲ್ಲಿ ಇರುವುದು ನಿನಗೆ ಸಂತೋಷ ಅನ್ನಿಸಬಹುದು. ಆದರೆ, ಪುಟ್ಟಿ, ಅಳಿಯ ಎಲ್ಲ ಬರ್ತಾ ಇರ್ತಾರೆ. ಮುಂದೆ ಕುಟುಂಬ ದೊಡ್ಡದಾಗುತ್ತೆ. ಬೇಕಿದ್ರೆ ನಿನಗೇಂತ ತೋಟದಲ್ಲೆ ಬೇರೆ ಮನೆ ವ್ಯವಸ್ಥೆ ಮಾಡ್ತೀನಿ. ನಿನ್ನ ಪಾಲಿನ ಆಸ್ತಿ ಎಲ್ಲ ನಿನಗೇ ಬರೆದು ಪತ್ರನೂ ಕೊಟ್ಟು ಬಿಡ್ತೀನಿ... ಬೇಡ ಅಂತ ಮಾತ್ರ ಹೇಳಬೇಡ... ಒಪ್ಪಿಕೊ... ಪ್ಲೀಸ್...'

ವಾಸಂತಿ ಕ್ಷಣಕಾಲ ಸುಮ್ಮನೆ ಕುಳಿತಳು.

'ಹೇಗೆ ಸಾಧ್ಯ ಇದು? ಬಾಳಿನಲ್ಲಿ ಬರೆಯದ ಹೆಸರನ್ನು ಆಸ್ತಿಯ ಮೇಲೆ ಬರೆಯುವುದೇ! ಬೇಡ. ನನ್ನ ಪಾಲಿಗೆ ಅವನೇನು ಬರೆದಿದ್ದಾನೋ ಅದರಲ್ಲಿ ಬದುಕುವುದೇ ನನಗೆ ಸಂತೋಷ. ಈ ಮನೆ ನಿಮಗೆ ಪುಟ್ಟದು ಅನ್ನಿಸಬಹುದು. ಆದರೆ ನನಗೆ ಇದು ಬಂಗಾರದ ಅರಮನೆ. ನಿಮ್ಮ ಬದುಕಿನ ಸುಖ, ನೋವು, ನಲಿವು, ಸಂತೋಷ, ದುಃಖ, ಕಷ್ಟ... ಯಾವುದರಲ್ಲಿಯೂ ಪಾಲು ತೆಗೆದುಕೊಳ್ಳದ ನನಗೆ ಆಸ್ತಿಯಲ್ಲಿ ಪಾಲು ಬೇಡ. ನನಗದರ ಆಸಕ್ತಿಯೂ ಇಲ್ಲ. ಪುಟ್ಟಿಗೆ ನೀವು ಏನು ಕೊಡಬೇಕು ಅಂತ ತಿಳಿಯುತ್ತೀರೋ ಅದರಲ್ಲಿ ನೀವು ಸ್ವತಂತ್ರರು. ನಾನು ಅಡ್ಡಿ ಬರಲ್ಲ. ಯಾವ ಸಂಬಂಧವೂ